


بسم اللهِ الرّحمٰن الرّحيم

# ಈದುಲ್ ಅಝ್‌ಹಾ – 2023

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29–06–2023** ರಂದು ನೀಡಿದ **ಈದುಲ್ ಅಝ್‌ಹಾ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ ۔

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔ اِيَّاكَ نَعْبُدُ وَاِيَّاكَ نَسْتَعِيْنُ ۔

اِهْدِنَا الصِّرَاطَ الْمُسْتَقِيْمَ ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:)*

لَنْ يَّنَالَ اللّٰهَ لُحُوْمُهَا وَلَا دِمَآؤُهَا وَلٰكِنْ يَّنَالُهُ التَّقْوٰى مِنْكُمْ ؕ كَذٰلِكَ سَخَّرَهَا لَكُمْ لِتُكَبِّرُوا اللّٰهَ عَلٰى مَا هَدٰىكُمْ ؕ وَبَشِّرِ الْمُحْسِنِيْنَ ﴿۳۸﴾

ಅರ್ಥ: ಅವುಗಳ ಮಾಂಸವಾಗಲಿ ರಕ್ತವಾಗಲಿ ಅಲ್ಲಾಹನಿಗೆ ತಲಪುವುದಿಲ್ಲ. ಆದರೆ ನಿಮ್ಮ ಭಯಭಕ್ತಿ ಮಾತ್ರ ಅವನಿಗೆ ತಲಪುತ್ತದೆ. ಅಲ್ಲಾಹನು ನಿಮಗೆ ಮಾರ್ಗದರ್ಶನ ನೀಡಿದುದಕ್ಕಾಗಿ ನೀವು ಅವನನ್ನು ಕೊಂಡಾಡಲಿಕ್ಕೋಸ್ಕರ ಈ ರೀತಿಯಾಗಿ ಅವನು ಅವುಗಳನ್ನು ನಿಮ್ಮ ಅಧೀನಕ್ಕೊಳಪಡಿಸಿರುವನು. ಸತ್ಕರ್ಮ ನಿರತರಿಗೆ ನೀನು ಶುಭವಾರ್ತೆಯನ್ನು ಅರುಹು.

(ಸೂರತುಲ್ ಹಜ್ಜ್ : 38)

ಇಂದು ಈದುಲ್ ಅಝ್‌ಹಾ. ಖುರ್‌ಬಾನಿಯ ಈದ್ ಎಂದೂ ಈ ಈದನ್ನು ಹೇಳುತ್ತಾರೆ. ಅಹ್ಮದಿಯರಿಗೆ ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಸಾಂಪತ್ತಿಕ ಖುರ್‌ಬಾನಿ (ಬಲಿದಾನ) ನೀಡುವ ಸ್ವಭಾವಗುಣವಿದೆ. ಇಂದಿನ ಕಾಲದಲ್ಲಿ ಅಲ್ಲಾಹನಿಗೋಸ್ಕರ ಜೀವಾರ್ಪಣೆಯನ್ನೂ ಮಾಡುವ ತಿಳುವಳಿಕೆ ಅಹ್ಮದಿಯರಿಗೆ ಎಷ್ಟರ ಮಟ್ಟಿಗೆ ಇದೆ ಎಂದರೆ ಪ್ರಾಯಶಃ ಬೇರೆ ಯಾರಿಗೂ ಅಂತಹ ತಿಳುವಳಿಕೆ ಇರುವುದಿಲ್ಲ. ಆದುದರಿಂದ ಆಡು ಕುರಿಗಳನ್ನೂ ಗೋವು ಮೊದಲಾದವುಗಳನ್ನು ಅಲ್ಲಾಹನ ಆಜ್ಞೆ ಪ್ರಕಾರ ಮತ್ತು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ಪ್ರಕಾರ ಬಲಿಯರ್ಪಿಸುವುದು ಅಹ್ಮದಿಯರಿಗೆ ಎಷ್ಟು ಸಂತೋಷದಾಯಕವಾಗಿದೆ ಎಂದರೆ ಅದನ್ನು ಅಂದಾಜು ಮಾಡಲಾಗುವುದಿಲ್ಲ. ಯಾರಿಗೆ ಅಂತಹ ಬಲಿದಾನ ನೀಡಲು ಸಾಧ್ಯವಾಗುವುದಿಲ್ಲವೋ ಅವರ ಮಾನಸಿಕ ಭಾವನೆಗಳನ್ನು ಅಂದಾಜು ಮಾಡುವುದು ಕಷ್ಟಕರವಾಗಿದೆ. ಈ ಕಾಲದಲ್ಲಿ ಅಹ್ಮದಿಯರಿಗೆ ತಮ್ಮ ಮನೋಭಾವನೆಗಳನ್ನು ಬಲಿದಾನ ನೀಡಬೇಕಾಗುತ್ತದೆ. ಮನೋಭಾವನೆಗಳನ್ನು ಬಲಿದಾನ ಮಾಡುವುದು ಸಾಮಾನ್ಯವಾದುದೇನೂ ಅಲ್ಲ. ನೀವು ನಿಮ್ಮ ಮನೋವೇದನೆಗಳನ್ನು ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸಲಿಕ್ಕಾಗಿ ಬಳಸಲು ಪ್ರಯತ್ನಿಸಿರಿ. ಪ್ರಾರ್ಥನೆಗಳಲ್ಲಿ ಬಹಳ ದೊಡ್ಡ ಶಕ್ತಿ ಇರುತ್ತದೆ. ಹಝ್‌ರತ್ ಹಾಜಿರ ಅಲೈಹಸ್ಸಲಾಂ ಮತ್ತು ಹಝ್‌ರತ್ ಇಸ್ಮಾಈಲ್ ಅಲೈಹಿಸ್ಸಲಾಮರ ಪ್ರಾರ್ಥನೆಗಳು ಮತ್ತು ಅವರ ಅಳಲು ಮತ್ತು ಆತಂಕಗಳು ಮತ್ತು ಅಲ್ಲಾಹನ ಮೇಲೆ ಪೂರ್ಣ ಭರವಸೆಗಳೇ ನೀರಿನ ಕಾರಂಜಿ ಉಕ್ಕಿ ಹರಿಯುವಂತೆ ಮಾಡಿತು. ಒಂದು ನಗರವೇ ಸ್ಥಾಪಿತವಾಯಿತು. ಅದು ಎಂತಹ ನಗರವೆಂದರೆ ಅದು ಇಸ್ಲಾಮಿನ ಕೇಂದ್ರವಾಯಿತು.

ನಾವು ಈದ್ ದಿನದಲ್ಲಿ ಮಾಡುವ ಮೃಗ ಬಲಿಯಿಂದ ನಾವು ಬಲಿದಾನ ನೀಡಿದೆವು ಅಲ್ಲಿಗೆ ಮುಗಿಯಿತು ಎಂಬ ಭಾವನೆ ಇರಬಾರದು. ಮೂಲ ಉದ್ದೇಶ ಅಲ್ಲಾಹನ ಸಂಪ್ರೀತಿಯನ್ನು ಇಚ್ಛಿಸುವುದಾಗಿದೆ ಮತ್ತು ತಖ್ವವನ್ನು ಹೊಂದುವುದಾಗಿದೆ. ಅದು ಪ್ರತಿಯೊಂದು ರೀತಿಯ ಬಲಿದಾನಗಳಿಗೆ ಉತ್ತೇಜಕವಾಗುವುದು.

ಹಝ್‌ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ತಾನು ಕಂಡ ಸ್ವಪ್ನದ ಕುರಿತು ಹಝ್‌ರತ್ ಇಸ್ಮಾಈಲ್‌ರೊಂದಿಗೆ ಹೇಳಿದರು: ನಾನು ನಿನ್ನನ್ನು ವಧಿಸುವುದಾಗಿ ಕನಸಿನಲ್ಲಿ ಕಂಡಿದ್ದೇನೆ. ಅದರ ಬಗ್ಗೆ ನಿನ್ನ ಅಭಿಪ್ರಾಯವೇನು? ಆಗ, ಅಲ್ಲಾಹನ ಸಂಪ್ರೀತಿ ಗಳಿಸುವ ಇಚ್ಛೆಯನ್ನು ಹೊಂದಿದ್ದ ಪುತ್ರನು ಹೀಗೆ ಉತ್ತರ ನೀಡಿದನು: "ನನ್ನ ತಂದೆಯೇ, ನಿಮಗೆ ಆಜ್ಞಾಪಿಸಲಾದಂತೆಯೇ ವರ್ತಿಸಿರಿ." ಅನಂತರ ಅವರು ತನ್ನ ಕೊರಳನ್ನು ವಧಿಸಲು ಒಡ್ಡಿದರು. ಆಗ ಅಲ್ಲಾಹನು ಆ ತಂದೆ ಮತ್ತು ಮಗನ ಬಲಿದಾನಕ್ಕೆ ಸಿದ್ಧವಾದ ಮನೋಭಾವವನ್ನು ಮೆಚ್ಚಿಕೊಂಡು ತನ್ನ ಪುತ್ರನ ಕೊರಳನ್ನು ಕಡಿಯುವುದರಿಂದ ತಂದೆಯನ್ನು ತಡೆದನು ಮತ್ತು ಅದಕ್ಕೆ ಬದಲಾಗಿ ಮೃಗ ಬಲಿ ನೀಡಲು ಆಜ್ಞಾಪಿಸಿದನು.

ಅವರ ಆ ಮನೋಭಾವ ಮತ್ತು ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಾಯೋಗಿಕ ಸನ್ನದ್ಧತೆ ಇವುಗಳನ್ನು ಅಲ್ಲಾಹನು ಅಂಗೀಕರಿಸಿದನು ಮತ್ತು ಮೃಗ ಬಲಿಯನ್ನು ಇಸ್ಲಾಮ್ ಧರ್ಮ ತತ್ವಗಳ ಭಾಗವನ್ನಾಗಿಯೂ ಆರಾಧನೆಯ ಕರ್ಮವನ್ನಾಗಿಯೂ ಮಾಡಿದನು. ಮನುಷ್ಯನ ಜೀವಕ್ಕೆ ಬದಲಾಗಿ ಮೃಗಬಲಿ ನೀಡುವುದು ಕೇವಲ ಬಾಹ್ಯ ಪ್ರದರ್ಶನಕ್ಕೋಸ್ಕರ ಮಾಡುವ ಕರ್ಮವಲ್ಲ. ಮುಸ್ಲಿಮರು ಹಜ್ಜ್ ಕಾಲದಲ್ಲಿ ಅಥವಾ ಈದ್ ಆಚರಿಸುವಾಗ ಬಲಿದಾನ ನೀಡುವ ಆಜ್ಞೆಯನ್ನು ಅಲ್ಲಾಹನು ನೀಡಿದಾಗ ಅದರೊಂದಿಗೆ ಹೀಗೆ ವಿಶದೀಕರಣ ಸಹ ನೀಡಿದನು – ಭಯಭಕ್ತಿಯನ್ನು ಹೊಂದಿ ಅಲ್ಲಾಹನ ಸಂಪ್ರೀತಿ ಗಳಿಸುವ ಉದ್ದೇಶದೊಂದಿಗೆ ಮೃಗಬಲಿ ನೀಡಬೇಕು.

ನಾನು ಖುತ್‌ಬದ ಆರಂಭದಲ್ಲಿ ಪಠಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ಅದರ ಬಗ್ಗೆ ವಿಶದೀಕರಿಸಿರುವನು. ಮೃಗಬಲಿಯ ತತ್ವಶಾಸ್ತ್ರ ಮತ್ತು ಉದ್ದೇಶವನ್ನು ವಿವರಿಸುತ್ತಾ ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನದ ಬೆಳಕಿನಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಅಲ್ಲಾಹನು ಇಸ್ಲಾಮಿನ ಶರೀಅತ್‌ನಲ್ಲಿ ಅನೇಕ ಆವಶ್ಯಕ ಆಜ್ಞೆಗಳ ಪಾಲನೆಗೆ ಉದಾಹರಣೆಗಳನ್ನು ನೀಡಿರುವನು. ಮನುಷ್ಯನಿಗೆ ಹೀಗೆ ಅಜ್ಞೆ ನೀಡಲಾಗಿದೆ. ಅವನು ತನ್ನ ಎಲ್ಲ ಶಕ್ತಿ

ಸಾಮರ್ಥ್ಯಗಳೊಂದಿಗೆ, ತನ್ನ ಪೂರ್ಣ ಅಸ್ತಿತ್ವದೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಬಲಿಯಾಗಬೇಕು. ಆದುದರಿಂದ ಮೃಗಬಲಿ ನೀಡುವುದನ್ನು ಮನುಷ್ಯನು ಹೊಂದಬೇಕಾದ ಸ್ಥಿತಿಗೆ ಒಂದು ಉದಾಹರಣೆಯನ್ನಾಗಿ ಮಾಡಲಾಗಿದೆ. ಆದರೆ ಮೂಲ ಉದ್ದೇಶ ಮೇಲೆ ಹೇಳಿದ ಬಲಿದಾನವಾಗಿವೆ. ಅದರ ಬಗ್ಗೆ ಅಲ್ಲಾಹನು ಹೇಳುತ್ತಾನೆ: ನೀವು ಬಲಿಯರ್ಪಿಸಿದ ಮೃಗಗಳ ಮಾಂಸವಾಗಲಿ ರಕ್ತವಾಗಲಿ ಅಲ್ಲಾಹನಿಗೆ ತಲಪುವುದಿಲ್ಲ. ಆದರೆ ನಿಮ್ಮ ಭಯಭಕ್ತಿ ಅಲ್ಲಾಹನಿಗೆ ತಲಪುತ್ತದೆ. ಎಂದರೆ ನೀವು ಅಲ್ಲಾಹನಿಗೆ ಎಷ್ಟು ಭಯ ಪಡಬೇಕೆಂದರೆ ಅವನ ಮಾರ್ಗದಲ್ಲಿ ಮೃತರಾಗುವವರೇ ಆಗಬೇಕು. ನೀವು ನಿಮ್ಮ ಕೈಗಳಿಂದ ಮೃಗಗಳನ್ನು ವಧಿಸುವ ಹಾಗೆಯೇ ನೀವು ಸಹ ಅಲ್ಲಾಹನ ಮಾರ್ಗದಲ್ಲಿ ವಧಿಸಲ್ಪಡಬೇಕು. ಭಯಭಕ್ತಿ (ತಖ್ವ) ಈ ಮಟ್ಟಕ್ಕಿಂತ ಕಡಿಮೆ ಮಟ್ಟದ್ದು ಆಗಿದ್ದರೆ ಅದು ನ್ಯೂನತೆಭರಿತವಾಗಿದೆ.

ಈ ತಖ್ವ (ಭಯಭಕ್ತಿ) ಮತ್ತು ಈ ರೀತಿಯ ಯೋಚನೆ ಬಲಿದಾನ ನೀಡುವವರಲ್ಲಿರಬೇಕು. ಹೀಗೆ ಇಲ್ಲವಾದರೆ ಕೇವಲ ಬಾಹ್ಯ ಬಲಿದಾನ ಮಹತ್ವಪೂರ್ಣವಾಗುವುದಿಲ್ಲ. ನೀವು ಪ್ರಾರ್ಥಿಸುತ್ತಾ ಇರಬೇಕು. ಅಲ್ಲಾಹನು ನಮಗೆ ಈದ್ ದಿನದಂದು ಮೃಗಬಲಿ ಅರ್ಪಿಸುವ ಭಾಗ್ಯ ನೀಡಲಿ ಮತ್ತು ನಮ್ಮ ಒಳಗೆ ಎಂತಹ ತಖ್ವ ಸೃಷ್ಟಿಸುವವನಾಗಲಿ ಎಂದರೆ ಅದು ವಾಸ್ತವಿಕ ತಖ್ವ ಆಗಬೇಕು. ಅಂತಹ ತಖ್ವದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒತ್ತಿ ಹೇಳಿದ್ದಾರೆ. ಅಂತಹ ತಖ್ವವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಶಕ್ತಿ ಮತ್ತು ತರಬೇತಿ ಮೂಲಕ ಸಹಾಬರು ಗಳಿಸಿದರು ಮತ್ತು ಅವರು ಆ ತಖ್ವವನ್ನು ತಮ್ಮ ಜೀವಿತದ ಭಾಗವನ್ನಾಗಿ ಮಾಡಿದರು. ಸಹಾಬರ ಪ್ರತಿಯೊಂದು ಕ್ಷಣ ಬಲಿದಾನ ನೀಡುತ್ತಾ ದಾಟಿ ಹೋಯಿತು. ಅವರು ತೋರಿಸಿದ ಉದಾಹರಣೆ ನಮಗೆ ಆದರ್ಶ ಮಾದರಿಯಾಗಿದೆ. ಅನಂತರ ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಅಲ್ಲಾಹನು ಅದನ್ನು ಪುನಶ್ಚೇತನ ಗೊಳಿಸಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಖ್ವವನ್ನು ಹೊಂದುವ ಬಗ್ಗೆ ಮತ್ತು ಅದರ ಮಾರ್ಗದಲ್ಲಿ ಸಂಚರಿಸುವ ಬಗ್ಗೆ ಪದೇ ಪದೇ ಉಪದೇಶಿಸಿದ್ದಾರೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರತಿಪಾದಿಸಿದ ಧರ್ಮವನ್ನು ಮನುಷ್ಯನು ಮನವರಿಕೆ ಮಾಡಬೇಕಾದುದು ಹೇಗೆ ಎನ್ನುವುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಪರಿಶುದ್ಧನನ್ನಾಗಿ ಮಾಡುವ ತನಕ ಯಾರೂ ಪರಿಶುದ್ಧನಾಗಲಾರ. ಮನುಷ್ಯನ ಆತ್ಮ ಅಲ್ಲಾಹನ ಬಾಗಿಲಲ್ಲಿ ಆತ್ಮ ನಿಂದನೆ ಮಾಡುತ್ತಾ ಮತ್ತು ಬಲಹೀನತೆ ಅಂಗೀಕರಿಸುತ್ತಾ ಬಿದ್ದಿರುವಾಗ ಅಲ್ಲಾಹನು ಅವನ ಪ್ರಾರ್ಥನೆ ಅಂಗೀಕರಿಸುತ್ತಾನೆ. ಆಗ ಆ ಮನುಷ್ಯ ಮುತ್ತಖಿ (ತಖ್ವ ಹೊಂದಿದವ) ಆಗುತ್ತಾನೆ. ಆಗ ಅವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧರ್ಮವನ್ನು ಮನವರಿಕೆ ಮಾಡಿಕೊಳ್ಳುವ ಸಾಮರ್ಥ್ಯ ಗಳಿಸುತ್ತಾನೆ. ಹೀಗೆ ಆಗುವುದಿಲ್ಲವಾದರೆ ಮನುಷ್ಯನು ಧರ್ಮ, ಧರ್ಮ ಎಂದು ಹೇಳುತ್ತಾ ಇರುವುದು ಮತ್ತು ಆರಾಧನೆ ಮಾಡುತ್ತಾ ಇರುವುದು ಕೇವಲ ಆಚಾರಗಳೂ ಯೋಚನೆಗಳೂ ಆಗಿವೆ. ಅವುಗಳನ್ನು ಮನುಷ್ಯನು ತನ್ನ ತಂದೆ ತಾತಂದಿರನ್ನು ಅನುಸರಿಸಿ ಮಾಡುತ್ತಾನೆ. ಆತ್ಮನಿಂದನೆ ಮತ್ತು ಬಲಹೀನತೆಯನ್ನು ಒಪ್ಪಿಕೊಂಡು ಅಲ್ಲಾಹನ ಸನ್ನಿಧಿಯಲ್ಲಿ ಆತ್ಮ ಬಿದ್ದುಬಿಟ್ಟ ಕಾರಣದಿಂದ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಹಝ್ರತ್ ಇಸ್ಮಾಈಲ್ ಅಲೈಹಿಸ್ಸಲಾಮ್ ಮತ್ತು ಹಝ್ರತ್ ಹಾಜಿರ ರಝಿಯಲ್ಲಾಹು ಅನ್‌ಹಾರವರು ತಮ್ಮ ಪ್ರಾರ್ಥನೆಗಳ ಅಂಗೀಕಾರದ ಎಂತಹ ಮಟ್ಟವನ್ನು ಗಳಿಸಿದರೆಂದರೆ ಅವರ ಪ್ರಾರ್ಥನೆಗಳು ಅಂಗೀಕರಿಸಲ್ಪಟ್ಟುದರ ಫಲಗಳನ್ನು ನಾವು ಇಂದು ಸಹ ಭಕ್ಷಿಸುತ್ತಿದ್ದೇವೆ. ಅವರು ಮಾಡಿದ ಪ್ರಾರ್ಥನೆಗಳ ಅಂಗೀಕಾರದ ಫಲ ಸ್ವರೂಪವಾಗಿಯೇ ಆ ವೈಭವಶಾಲಿ ಪ್ರವಾದಿ ಅವರ ಸಂತಾನ ಪರಂಪರೆಯಲ್ಲಿ ಜನಿಸಿದರು. ಅವರೊಂದಿಗೆ ಸಂಬಂಧ ಜೋಡಿಸುವ ಮೂಲಕ ಮತ್ತು ಅವರನ್ನು ಅನುಸರಿಸುವ ಮೂಲಕ ಮನುಷ್ಯರಿಗೆ ಸರ್ವಶಕ್ತನಾದ ಅಲ್ಲಾಹನ ಸಾಮೀಪ್ಯ ದೊರಕುತ್ತದೆ ಮತ್ತು ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ. ನಾವು ವಾಸ್ತವಿಕವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರಾಗಿದ್ದರೆ ನಾವು ತಖ್ವವನ್ನು ಅವಲಂಬಿಸಿ ನಡೆಯುತ್ತಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರತಿಪಾದಿಸಿದ ಧರ್ಮದ ಬಗ್ಗೆ ತಿಳುವಳಿಕೆ ಗಳಿಸಬೇಕು. ಆಗ ನೀವು ನೋಡುವಿರಿ, ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಹೇಗೆ ಅಂಗೀಕರಿಸುತ್ತಾನೆ ಎಂದು.

ಬಲಿದಾನಕ್ಕೆ ಸಂಬಂಧಿಸಿದ ತತ್ವಜ್ಞಾನ ಮತ್ತು ತಖ್ವದ ವಾಸ್ತವಿಕ ರೂಪದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: ಸತ್ಯಸಂಧರಾದ ಜನರು ಆತ್ಮ ಮತ್ತು ಆಧ್ಯಾತ್ಮಿಕವಾಗಿ ಅಲ್ಲಾಹನ ಕಡೆಗೆ ಎತ್ತಲ್ಪಡುತ್ತಾರೆ. ಅಲ್ಲದೆ ಅವರ ಮಾಂಸ, ರಕ್ತ ಎಲುಬುಗಳು ಅಲ್ಲಾಹನ ತನಕ ತಲಪುವುದಿಲ್ಲ. ಆದುದರಿಂದ ಪುನಃ ಉಪದೇಶಿಸುತ್ತೇನೆ. ನೀವು ನಿಮ್ಮ ಕರ್ಮಗಳ ಕಡೆಗೆ ದೃಷ್ಟಿ ಇರಿಸಿರಿ. ಸತ್ಕರ್ಮಗಳೇ ಮನುಷ್ಯನ ಬಲಿದಾನಗಳು ಅಲ್ಲಾಹನಿಂದ ಅಂಗೀಕರಿಸಲ್ಪಡುವ ಮಾರ್ಗಗಳಾಗಿವೆ. ಅಲ್ಲಾಹನ ಹಕ್ಕುಗಳನ್ನು ಈಡೇರಿಸುವ ಕರ್ಮಗಳು ಮತ್ತು ಅವನ ದಾಸರ ಹಕ್ಕುಗಳನ್ನು ಈಡೇರಿಸುವ ಕರ್ಮಗಳೇ ಸತ್ಕರ್ಮಗಳಾಗಿವೆ.

ಮತ್ತೂ ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ದೈವಿಕ ನಿಯಮಗಳು ಪುರಾತನ ಕಾಲದಿಂದ ಹೇಗೆ ಜಾರಿಯಲ್ಲಿದೆ ಎಂದರೆ ತಖ್ವದ ಬಗ್ಗೆ ಜ್ಞಾನ ಮತ್ತು ಅದರ ಫಲಗಳು ಪರಿಪೂರ್ಣವಾಗಿ ಸೂಕ್ಷ್ಮಜ್ಞಾನ ಗಳಿಸುವ ಮೂಲಕ ಲಭಿಸುತ್ತದೆ. ಅಲ್ಲಾಹನ ಬಗ್ಗೆ ಭಯ, ಪ್ರೀತಿ ಮತ್ತು ಅವನ ಮಹತ್ವದ ಬಗ್ಗೆ ಅರಿವು ಇವುಗಳ ಬೇರು ಅಲ್ಲಾಹನ ಬಗ್ಗೆ ಪರಿಪೂರ್ಣ ಸೂಕ್ಷ್ಮಜ್ಞಾನ ಗಳಿಸುವುದಾಗಿದೆ. ಆದುದರಿಂದ ಯಾರಿಗೆ ಅಲ್ಲಾಹನ ಬಗ್ಗೆ ಪರಿಪೂರ್ಣ ಜ್ಞಾನ ನೀಡಲಾಗಿದೆಯೋ ಅವನಿಗೆ ಅಲ್ಲಾಹನ ಬಗ್ಗೆ ಪರಿಪೂರ್ಣ ಭಯ ಮತ್ತು ಪ್ರೀತಿ ಸಹ ನೀಡಲಾಗುತ್ತದೆ. ಯಾರಿಗೆ ಪರಿಪೂರ್ಣವಾದ ಭಯ ಮತ್ತು ಪ್ರೀತಿ ನೀಡಲಾಗಿದೆಯೋ

ಅವನಿಗೆ ನಿರ್ಭಯತೆಯಿಂದ ಹುಟ್ಟುವ ಪಾಪ ಕೃತ್ಯಗಳಿಂದ ಮೋಕ್ಷ ನೀಡಲ್ಪಡುತ್ತದೆ. ಸರ್ವಶಕ್ತನಾದ ಅಲ್ಲಾಹನ ಬಗ್ಗೆ ಸೂಕ್ಷ್ಮಜ್ಞಾನ ನೀಡಲ್ಪಟ್ಟವನು ಎಷ್ಟು ಸೌಭಾಗ್ಯಶಾಲಿಯಾಗಿದ್ದಾನೆ.

ಅಲ್ಲಾಹನ ಬಗ್ಗೆ ಭಯ ಮತ್ತು ಪ್ರೀತಿ ಹೃದಯದಲ್ಲಿ ಹುಟ್ಟಿರುವುದಾದರೆ ಅದನ್ನು ಅಳೆಯುವ ಮಾನದಂಡ ಇದಾಗಿದೆ: ಪ್ರತಿಯೊಂದು ಪಾಪಕೃತ್ಯದಿಂದ ಅಂತಹ ಮನುಷ್ಯ ತನ್ನನ್ನು ರಕ್ಷಿಸಿಕೊಳ್ಳುತ್ತಾನೆ. ಮನುಷ್ಯ ಸಹಜವಾದ ಬಲಹೀನತೆಯಿಂದ ಯಾವಾಗಲಾದರೂ ಅಂತಹ ವ್ಯಕ್ತಿ ಬಲಹೀನತೆ ಪ್ರಕಟಿಸಿದರೆ ತಕ್ಷಣ ಇಸ್ತಿಗ್‌ಫಾರ್ ಮಾಡಿ ಅಲ್ಲಾಹನ ಕಡೆಗೆ ಮರಳುತ್ತಾನೆ. ಸತ್ಯ ವಿಶ್ವಾಸಿಯಾದವನು ನಿರ್ಭಯನಾಗಿ ಯಾವುದೇ ತಪ್ಪು ಮಾಡಲಾರನು. ಅವನ ಮೇಲೆ ಅಲ್ಲಾಹನ ಬಗ್ಗೆ ಪ್ರೀತಿ ಮೇಲ್ಗೈ ಪಡೆದಿರುತ್ತದೆ. ಇದೇ ಸತ್ಯವಾದ ಈಮಾನ್ ಆಗಿದೆ. ಅಲ್ಲಾಹನು ನನ್ನನ್ನು ವೀಕ್ಷಿಸುತ್ತಾ ಇದ್ದಾನೆ ಎಂಬ ದೃಢ ವಿಶ್ವಾಸವನ್ನು ಪ್ರತಿಕ್ಷಣ ಅವನು ಹೊಂದಿರುತ್ತಾನೆ. ನನ್ನ ಹೃದಯದ ಸ್ಥಿತಿಯನ್ನು ಸಹ ಅಲ್ಲಾಹನು ತಿಳಿದಿರುತ್ತಾನೆ. ಆದುದರಿಂದ ನನ್ನ ಯಾವುದೇ ಕೆಲಸ ಅಲ್ಲಾಹನಿಗೆ ಅತೃಪ್ತಿಕರವಾಗಬಾರದು ಎಂದು ಅವನು ಯೋಚಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನಲ್ಲಿ ಇಂತಹ ಸ್ಥಿತಿ ಉಂಟಾದರೆ ಅದೇ ವಾಸ್ತವಿಕ ಇಸ್ಲಾಮ್ ಆಗಿದೆ. ಆ ಇಸ್ಲಾಮ್ ಪ್ರಕಾರ ಪ್ರತಿಯೊಬ್ಬನು ಸತ್ಯವಿಶ್ವಾಸಿ ಚಲಿಸಬೇಕಾಗಿದೆ. ಇಸ್ಲಾಮಿನ ಈ ಸ್ಥಿತಿಯ ಪ್ರಭಾವದಿಂದ ಮನುಷ್ಯನು ತನ್ನ ಕೊರಳನ್ನು ಕಡಿಸಿಕೊಳ್ಳಲು ಸಿದ್ಧನಾಗುತ್ತಾನೆ. ಅವನು ಪ್ರತಿಯೊಂದು ಬಲಿದಾನ ನೀಡಲು ಸಿದ್ಧನಾಗಿರುತ್ತಾನೆ. ಎಂದರೆ ಅಲ್ಲಾಹನ ಸಂಪ್ರೀತಿ ಗಳಿಸುವುದೇ ಅದರ ಉದ್ದೇಶಲಕ್ಷ್ಯವಾಗಿರುತ್ತದೆ. ಅವನ ಪ್ರತಿಯೊಂದು ನಡೆ ನುಡಿ ಅಲ್ಲಾಹನ ತೃಪ್ತಿಯನ್ನು ಗಳಿಸಲಿಕ್ಕೋಸ್ಕರವಾಗಿರುತ್ತದೆ. ಮನುಷ್ಯನಲ್ಲಿ ಈ ಸ್ಥಿತಿ ತಲೆದೋರಿದರೆ ಅದು ವಾಸ್ತವಿಕ ಇಸ್ಮಾಈಲೀ ಬಲಿದಾನದ ಉದಾಹರಣೆ ಆಗುತ್ತದೆ. ಒಟ್ಟಿನಲ್ಲಿ ಈ ಈದ್ ನಮಗೆ ಪರಿಪೂರ್ಣ ಪ್ರೀತಿ ಮತ್ತು ಪ್ರೇಮದ ಪಾಠವನ್ನು ಕಲಿಸಲಿಕ್ಕೋಸ್ಕರವಾಗಿದೆ. ಮೃಗಬಲಿ ನೀಡಿ ಅವುಗಳ ಮಾಂಸವನ್ನು ತಿನ್ನುವುದಕ್ಕೋಸ್ಕರವಲ್ಲ ಈ ಈದ್ ದಿನಾಚರಣೆ. ನಾವು ಈ ಸೂಕ್ಷ್ಮಜ್ಞಾನದ ಅಂಶವನ್ನು ಮನವರಿಕೆ ಮಾಡಿಕೊಳ್ಳುವುದಾದರೆ ನಾವು ನಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ವೈಭವಶಾಲಿ ದೃಷ್ಟಾಂತಗಳನ್ನು ಕಾಣುವೆವು ಮಾತ್ರವಲ್ಲ ವಿಜಯದ ದೃಶ್ಯಗಳನ್ನು ನಮ್ಮ ಜೀವಿತ ಕಾಲದಲ್ಲಿಯೇ ಕಾಣುವವರಾಗುವೆವು.

ತಖ್ವವನ್ನು ಗಳಿಸುವುದರೊಂದಿಗೆ ಈದುಲ್ ಅಝ್‌ಹಾದಲ್ಲಿ ಮಾಡಲಾಗುವ ಮೃಗಬಲಿಗಳನ್ನು ಅವುಗಳನ್ನು ಮಾಡಲು ಸಾಮರ್ಥ್ಯ ಹೊಂದಿರುವವರು ಮಾಡಬೇಕಾಗಿದೆ. ಹೀಗೆ ಬಾಹ್ಯವಾಗಿ ಮೃಗಬಲಿ ನೀಡುವುದು ಸಹ ಸುನ್ನತ್ ಆಗಿದೆ. ಇಬ್ರಾಹೀಮೀ ನಡೆವಳಿಕೆಯನ್ನು ಇಸ್ಲಾಮ್ ವಿಶಿಷ್ಟವಾಗಿ ಜಾರಿಗೊಳಿಸಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವಾಗಲೂ ಮೃಗಬಲಿ ಅರ್ಪಿಸುತ್ತಿದ್ದರು. ಮುಸ್ಲಿಮ್ ಸಮುದಾಯದ ಬಡಜನರ ಪರವಾಗಿ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೃಗಬಲಿ ನೀಡುತ್ತಿದ್ದರು. ಈ ಮೃಗಬಲಿ ನೀಡುವುದು ಸಹ ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸುವ ಒಂದು ಮಾರ್ಗವಾಗಿದೆ. ಈ ಕೃತ್ಯದಿಂದಲೂ ಅಲ್ಲಾಹನ ಪ್ರೀತಿ ವರ್ಧಿಸುತ್ತದೆ. ಏಕೆಂದರೆ ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರ ಅಲ್ಲಾಹನ ದಾಸರಿಗೆ ಸೇವೆ ಮಾಡಲಾಗುತ್ತವೆ. ಮನುಷ್ಯನ ಬಾಹ್ಯ ಕರ್ಮಗಳು ಆತ್ಮದ ಮೇಲೆ ಪ್ರಭಾವ ಬೀರುತ್ತವೆ ಎಂಬ ಪಾಠ ಈ ಬಾಹ್ಯ ಬಲಿದಾನ ಮತ್ತು ಬಾಹ್ಯ ಕರ್ಮಗಳಲ್ಲಿ ಅಡಕವಾಗಿದೆ.

ಆರ್ಥಿಕ ಸಾಮರ್ಥ್ಯ ಇರುವವರು ಈದ್ ದಿನದಂದು ಮೃಗಬಲಿ ನೀಡಲು ಲಕ್ಷಗಟ್ಟಲೆ ಹಣ ಖರ್ಚು ಮಾಡುವಾಗ ಬಡವರ ಇತರ ಆವಶ್ಯಕತೆಗಳ ಬಗ್ಗೆ ಸಹ ಗಮನ ಹರಿಸಿ ಅವರ ಆವಶ್ಯಕತೆಗಳನ್ನು ಈಡೇರಿಸಿ ಕೊಡುವವರಾಗಬೇಕು. ನಮ್ಮೊಳಗೆ ತಖ್ವ ಸೃಷ್ಟಿಸುತ್ತಾ ನಮ್ಮ ಸ್ಥಿತಿಗತಿಗಳನ್ನು ಅಲ್ಲಾಹನ ಸಂಪ್ರೀತಿಗೆ ಅನುಸಾರ ಹಾಕಲು ಸರ್ವಶಕ್ತನಾದ ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ನಾವು ಪೂರ್ಣವಾಗಿ ಅಲ್ಲಾಹನಿಗೆ ಸೇರಿದವರೇ ಆಗುವಂತಾಗಲಿ ಮತ್ತು ಅಲ್ಲಾಹನು ನಮಗೆ ಶತ್ರುಗಳ ಕೆಡುಕುಗಳಿಂದ ಮುಕ್ತಿ ಲಭಿಸುವ ವ್ಯವಸ್ಥೆಯನ್ನು ಬೇಗನೆ ಸೃಷ್ಟಿಸುವವನಾಗಲಿ. ಅವನು ನಮ್ಮ ಬಲಿದಾನಗಳನ್ನು ಸ್ವೀಕರಿಸುವವನಾಗಲಿ. ಯಾರಿಗಾದರೂ ಯಾವುದಾದರೂ ಕಾರಣದಿಂದ ಮೃಗಬಲಿ ನೀಡುವ ಭಾಗ್ಯ ಲಭಿಸಿರದಿದ್ದರೆ ಸರ್ವಶಕ್ತನಾದ ಅಲ್ಲಾಹನು ಅವರಿಗೆ ಬಲಿದಾನ ನೀಡುವ ಸಂಕಲ್ಪಗಳ ಪ್ರತಿಫಲ ನೀಡುವನು.

ಮುಸ್ಲಿಮರಿಗೆ ಬುದ್ಧಿ ಮತ್ತು ತಿಳುವಳಿಕೆ ಅಲ್ಲಾಹನು ನೀಡುವವನಾಗಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ ಮಾರ್ಗದರ್ಶನವನ್ನು ಮನವರಿಕೆ ಮಾಡಿಕೊಂಡು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮನಾಗಿ ಆಗಮಿಸಿದ ಮಸೀಹ್ ಮೌಊದ್ ಮತ್ತು ಮಹ್‌ದಿ ಮಅ್‌ಹೂದರನ್ನು ಅವರು ನಂಬುವವರಾಗಲಿ.

ಬಂಧನದ ಕಷ್ಟ ಕಾರ್ಪಣ್ಯಗಳನ್ನು ಅಲ್ಲಾಹನಿಗೋಸ್ಕರ ಸಹಿಸಿಕೊಳ್ಳುತ್ತಿರುವ ಬಂಧಿತರಾದ ಅಹ್ಮದಿಯರ ಬಲಿದಾನಗಳನ್ನು ಸಹ ಅಲ್ಲಾಹನು ಸ್ವೀಕರಿಸುವವನಾಗಲಿ ಮತ್ತು ಅವರು ಬೇಗನೆ ಬಂಧನದಿಂದ ಮುಕ್ತರಾಗುವಂತೆ ಅಲ್ಲಾಹನು ಮಾಡಲಿ. ಶಹೀದರಾದವರ ಕುಟುಂಬಗಳನ್ನು ಅಲ್ಲಾಹನು ಸಂರಕ್ಷಿಸುವವನಾಗಲಿ. ಆ ಕುಟುಂಬಗಳು ಅಲ್ಲಾಹನೊಂದಿಗೆ ತಮ್ಮ ಸಂಬಂಧವನ್ನು ವರ್ಧಿಸುವವರಾಗುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ. ಲೋಕದಲ್ಲಿ ಅಶಾಂತಿ, ಕಲಹಗಳು ಮತ್ತು ಯುದ್ಧಗಳು ಕೊನೆಗೊಳ್ಳಲು ಸಹ ಪ್ರಾರ್ಥಿಸಿರಿ. ಪಾಕಿಸ್ಥಾನದ ಅಹ್ಮದಿಯರಿಗೋಸ್ಕರ ವಿಶಿಷ್ಟವಾಗಿ ಪ್ರಾರ್ಥಿಸಿರಿ. ಅವರ ಸಾಂಪತ್ತಿಕ, ಶಾರೀರಿಕ ಮತ್ತು ಭಾವನೆಗಳಿಗೆ ಸಂಬಂಧಿಸಿ ಬಲಿದಾನಗಳನ್ನು ಅಲ್ಲಾಹನು ಸ್ವೀಕರಿಸುವವನಾಗಲಿ. ಬುರ್ಕಿನೋಫಾಸೋ, ಬಂಗ್ಲಾದೇಶ, ಅಲ್‌ಜೀರಿಯಾ ಮತ್ತು ಲೋಕದಲ್ಲಿರುವ ಎಲ್ಲ ಅಹ್ಮದಿಯರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರೆಲ್ಲರನ್ನೂ ತನ್ನ ಅನುಗ್ರಹಗಳ ಮತ್ತು ಕಾರುಣ್ಯದ ಚಾದರದಿಂದ ಹೊದಿಸುವವನಾಗಲಿ. ಎಲ್ಲ ಅಹ್ಮದಿಯರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ

ಧ್ವಜವನ್ನು ಲೋಕದಾದ್ಯಂತ ಹಾರಿಸಲು, ತೌಹೀದನ್ನು ಹಬ್ಬುವಂತೆ ಮಾಡಲು, ಯಾವಾಗಲೂ ತಮ್ಮ ಪ್ರತಿಜ್ಞೆ ಈಡೇರಿಸಲು ಸಿದ್ಧರಾಗಿ ಪ್ರತಿಯೊಂದು ರೀತಿಯ ಬಲಿದಾನ ನೀಡಲು ಸಿದ್ಧರಾಗಿರಿ. ಅಲ್ಲಾಹನು ನಮಗೆಲ್ಲರಿಗೂ ಹಾಗೆ ಮಾಡುವ ಭಾಗ್ಯ ನೀಡುವವನಾಗಲಿ.

(ಖುತ್‌ಬ ಸಾನಿ ಮತ್ತು ದುಆದ ನಂತರ ಹುಝೂರ್ ಹೇಳಿದರು:) ನಿಮಗೆಲ್ಲರಿಗೂ ಈದ್ ಮುಬಾರಕ್. ಲೋಕದಲ್ಲಿರುವ ಎಲ್ಲ ಅಹ್ಮದಿಯರಿಗೂ ಈದ್ ಮುಬಾರಕ್ ಆಗಲಿ. ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Eid-ul-Az'ha Khutba delivered by Hadrath Khaleefatul Masih Al Khamis[atba]***

*At, Masjid Mubarak, Islamabad, Tilford, UK, on 29-06-2023.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk,

***Reviewed by:*** M.P Ibrahim | ***Typing:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*